## ಚೀನಾದ ಹಿಂದೆ ಭಾರತ!

ವರ್ಲ್ಡ್ ಗೋಲ್ಡ್ ಕೌನ್ಸಿಲ್ ಪ್ರಕಾರ ಪ್ರತೀ ವರ್ಷ ಜಾಗತಿಕ ಚಿನ್ನದ ಬೇಡಿಕೆ ಅಂದಾಜು 4300 ಟನ್ ಗಳ ಆಸುಪಾಸಿನಲ್ಲಿದೆ. ಇದರಲ್ಲಿ ಅರ್ಧಕ್ಕೂ ಹೆಚ್ಚು ಚಿನ್ನ, ಆಭರಣ ತಯಾರಿಕೆಗೆ ಬಳಕೆಯಾದರೆ, ಇನ್ನು ಕಾಲು ಭಾಗ ಹೂಡಿಕೆಯ ರೂಪದಲ್ಲಿ ಅಂದರೆ ಬಿಸ್ಕಿಟ್ ಮತ್ತು ನಾಣ್ಯಗಳಾಗಿ ಖರೀದಿಸಲ್ಪಡುತ್ತದೆ. ಪ್ರಮುಖ ಬ್ಯಾಂಕುಗಳೂ ಚಿನ್ನ ಖರೀದಿಯಲ್ಲಿ ತೊಡಗುವುದರಿಂದ ಈ ಪ್ರಮಾಣದಲ್ಲಿ ಶೇಕಡಾ 14ರಷ್ಟು ಚಿನ್ನ ಬ್ಯಾಂಕುಗಳಿಗೆ ಹೋಗುತ್ತದೆ. ಇನ್ನುಳಿದ ಚಿನ್ನವನ್ನು ವಿವಿಧ ಕೈಗಾರಿಕೆಗಳು ತಮ್ಮ ಬಳಕೆಗಾಗಿ ಕೊಳ್ಳುತ್ತವೆ.

ಚೀನಾ ಮತ್ತು ಭಾರತ ಹೆಚ್ಚು ಚಿನ್ನ ಖರೀದಿ ಮಾಡುವ ದೇಶಗಳು. ಜಗತ್ತಿನಲ್ಲಿ ಉತ್ಪಾದನೆಯಾಗುವ ಚಿನ್ನದ ಅರ್ಧಕ್ಕಿಂತ ಹೆಚ್ಚು ಪಾಲನ್ನು ಈ ದೇಶಗಳೇ ಗುಳುಂ ಮಾಡುತ್ತವೆ! ಸಾಮ್ಯವೆಂದರೆ – ಎರಡೂ ದೇಶಗಳು ಮುಂದುವರೆಯುತ್ತಿರುವ ರಾಷ್ಟ್ರಗಳು. ಇತ್ತೀಚಿನ ದಿನಗಳಲ್ಲಿ ಹೊಸ ಉದ್ಯೋಗ ಸೃಷ್ಟಿಯಿಂದಾಗಿ ಸ್ಥಿರ ಆರ್ಥಿಕ ವ್ಯವಸ್ಥೆಯನ್ನು ಕಂಡ ದೇಶಗಳು. ಯುವಜನರ ಹತ್ತಿರ ಹೆಚ್ಚು ಚಿನ್ನ ಕೊಳ್ಳಲು ಹಣ ಇದೆ. ಎರಡೂ ದೇಶಗಳಿಗೆ ಪ್ರಾಚೀನ ಪರಂಪರೆಗಳಿವೆ. ಸಾಂಪ್ರದಾಯಿಕವಾಗಿ ಚಿನ್ನವನ್ನು ಹೂಡಿಕೆ ಹಾಗೂ ಶ್ರೇಷ್ಟ ಎನ್ನುವ ನಂಬಿಕೆಯನ್ನು ಪೋಷಿಸುವ ಮೂಲಧಾರೆ ಇದೆ. ಹಾಗಾಗಿ ಈ ದೇಶಗಳಲ್ಲಿ ಯಾವುದೇ ಸುಸಂದರ್ಭ ಇದ್ದರೂ ಅದರಲ್ಲಿ ಚಿನ್ನ ಖರೀದಿಗೆ ಒಂದು ಅವಕಾಶ ಸೃಷ್ಟಿಯಾಗುತ್ತದೆ.

ಭಾರತದಲ್ಲಿ ಬಂಗಾರ ದೊಡ್ಡ ಪ್ರಮಾಣದಲ್ಲಿ ದೇವರಿಗೆ ಅರ್ಪಿಸಲ್ಪಡುತ್ತದೆ. ಹಾಗಾಗಿ ದೇವಸ್ಥಾಗಳಲ್ಲಿರುವ ಬಂಗಾರದ ಮೌಲ್ಯವನ್ನು ಒಟ್ಟಾರೆಯಾಗಿ ಹೇಳಲು ಸಾಧ್ಯವಾಗಿಲ್ಲ. ಆದರೂ ಬಂಗಾರ ಹೆಚ್ಚು ಹೊಂದಿರುವ ಅಥವಾ ಅರ್ಪಿಸಲ್ಪಡುವ ದೇವರುಗಳಲ್ಲಿ ತಿರುಪತಿ ದೇವಸ್ಥಾನ ಮುಂದಿದ್ದರೆ, ಕೇರಳದ ತಿರುವಾಂಕೂರು ರಾಜಮನೆತನಕ್ಕೆ ಸೇರಿದ ಅನಂತ ಪದ್ಮನಾಭ ದೇವಸ್ಥಾನ ಎರಡನೆ ಸ್ಥಾನದಲ್ಲಿದೆ. ಇಲ್ಲಿ ನೆಲಮಾಳಿಗೆಯಲ್ಲಿರುವ ಹೇರಳ ಚಿನ್ನದ ಪ್ರಮಾಣ ಕೆಲ ವರ್ಷಗಳ ಹಿಂದೆ ಚರ್ಚೆಗೆ ಬಂದು ಈ ಬಂಗಾರ ಹಾಗೂ ಅದರ ರಕ್ಷಣೆಗೆ ಸಂಬಂಧಪಟ್ಟ ಹಾಗೆ ನೂರೆಂಟು ಸುದ್ದಿ ಕಥೆಗಳು ಪ್ರಕಟವಾದದ್ದನ್ನು ನೆನಪಿಸಿಕೊಳ್ಳಬಹುದು.

ವಿರಳ ಲೋಹ ಅಷ್ಟೆ. ಇವತ್ತಿಗೂ ನಮ್ಮಲ್ಲಿ ದುಬೈಗೆ ಹೋಗಿ ಮರಳಿದವರಿಗೆ ನಾವು ಕುತೂಹಲದಿಂದ ಕೇಳುವ ಪ್ರಶ್ನೆ– ಬಂಗಾರ ಎಷ್ಟು ತಂದ್ರೀ.. ಎನ್ನುವುದು! ದುಬೈನಿಂದ ಬರುವಾಗ ನೀವು ಇನ್ನೇನು ಮಹತ್ವದ ವಸ್ತುಗಳನ್ನು ತಂದರೂ ಅದನ್ನು ಕೇಳುವವರಿಲ್ಲ!

ಚಿನ್ನ ನಮ್ಮ ಬದುಕಿನ ಶೈಲಿ ಮತ್ತು ಸಂಪ್ರದಾಯಗಳಲ್ಲಿ ತಲೆತಲಾಂತರದಿಂದ ಹಾಸುಹೊಕ್ಕಾಗಿದೆ. ಚಿನ್ನದ ಉಡುಗೊರೆಗೆ ಹಾಗೂ ಸಮಾರಂಭಗಳಲ್ಲಿ ಚಿನ್ನವನ್ನು ಬಳಸುವುದಕ್ಕೆ ಅತ್ಯಂತ ಮಹತ್ವದ ಕಾರಣಗಳಿವೆ. ಬಹುತೇಕ ಧರ್ಮ– ಜಾತಿಗಳ ಸಂಪ್ರದಾಯಗಳಲ್ಲಿ ಮಗಳಿಗೆ ತಾಯಿಯ ಚಿನ್ನ/ ಆಸ್ತಿ ಬಳುವಳಿಯಾಗಿ ಬರುತ್ತದೆ. ಬಹುಕಾಲದಿಂದ, ಹೆಣ್ಣು ತನ್ನದೇ ನಿರ್ಧಾರ ಮಾಡಬಲ್ಲ ಅಂಶಗಳಲ್ಲಿ ಚಿನ್ನವೂ ಒಂದು. ತನ್ನ ನಂತರ ತನ್ನ ವಶದಲ್ಲಿರುವ ಚಿನ್ನದ ವಿಲೇವಾರಿ ಮಾಡುವ ಹಕ್ಕನ್ನು ಹೆಣ್ಣು ತನ್ನಲ್ಲೇ ಉಳಿಸಿಕೊಂಡು ಬಂದಿದ್ದಾಳೆ. ತವರು ಮನೆಯ ಚಿನ್ನ ಮಗಳಿಗೆ ಬಂದು ನಂತರ ಮುಂದಿನ ಪೀಳಿಗೆಯ ಹೆಣ್ಣು ಮಕ್ಕಳಿಗೆ ಹೋಗುತ್ತದೆ. ಕೆಲವು ಸಮುದಾಯಗಳಲ್ಲಿ ಇದು ಸೊಸೆಯಂದಿರಿಗೆ ಹೋಗುವುದೂ ಉಂಟು.

### ಚಿನ್ನವೆಂಬ ಆಪದ್ಧನ

ಎಲ್ಲ ದೇಶಗಳಿಗೂ ಚಿನ್ನ ಆಪದ್ಧನ. ರಿಸರ್ವ್, ಫೆಡರಲ್ ಬ್ಯಾಂಕುಗಳು ಮುದ್ರಿಸಿರುವ ಹಣಕ್ಕೆ ಸಂವಾದಿಯಾಗಿ ಅಷ್ಟು ಪ್ರಮಾಣದ ಚಿನ್ನವನ್ನು ಸಂಗ್ರಹಿಸಿ ಇಟ್ಟಿರಲೇಬೇಕು. ಅದು ದೇಶದ ಜನರಿಗೆ ಬ್ಯಾಂಕ್‌ಗಳು ಕೊಡುವ ಖಾತರಿ. ಯುದ್ಧ ಶುರುವಾದರೆ, ಷೇರು ಮಾರುಕಟ್ಟೆ ಅಪಾಯಕ್ಕೆ ಸಿಲುಕಿದರೆ, ದೇಶದ ಹಣಕಾಸು ಸ್ಥಿತಿ ಬಿಗಡಾಯಿಸಿದರೆ ಚಿನ್ನವನ್ನು ಯಾವತ್ಉ ಬೇಕಿದ್ದರೂ ಬಳಸಿಕೊಳ್ಳಬಹುದು.

ನಮ್ಮ ಕುಟುಂಬಗಳಲ್ಲೂ ಹಾಗೆಯೇ. ತಲೆಮಾರುಗಳಿಂದ ಈ ಕಾಲದವರೆಗೂ ಎಲ್ಲ ಕುಟುಂಬಗಳಲ್ಲೂ ಚಿನ್ನ ಅಪದ್ಧನ ಎಂದೇ ಪರಿಗಣಿತವಾಗಿದೆ. ಸೌಂದರ್ಯ ಹೆಚ್ಚಿಸಲು ಮತ್ತು ಜೀವನಶೈಲಿಯ ಪ್ರದರ್ಶನಕ್ಕೆ ಇತ್ತೀಚೆಗೆ ಚಿನ್ನದ ಬಳಕೆ ಆಗುತ್ತಿದ್ದರೂ, ಮೂಲವಾಗಿ ಚಿನ್ನ ಮತ್ತು ಭೂಮಿ ನಮ್ಮಲ್ಲಿ ಆಪತ್ತಿಗಾಗುವ ಸೊತ್ತು ಎಂದೇ ಪರಿಗಣಿತವಾಗಿದೆ.

ಚಿನ್ನದ ವ್ಯಾಪಾರದಲ್ಲಿ ಎಲ್ಲವೂ ಸರಳವಲ್ಲ. ಅಂತರ್ರಾಷ್ಟ್ರೀಯ ಮಾರುಕಟ್ಟೆಯ ಏರಿಳಿತಕ್ಕೆ ಅನುಗುಣವಾಗಿ ಚಿನ್ನದ ಬೆಲೆ ನಿರ್ಧಾರವಾಗುತ್ತದೆ. ಅದಕ್ಕೆ ತಕ್ಕಂತೆ ಚಿನ್ನದ ವ್ಯಾಪಾರದಲ್ಲಿ ಬೆಲೆಯ ಏರುಪೇರು ನಡೆದೇ ಇರುತ್ತದೆ. ಚಿನ್ನದ ಬೆಲೆ ಕಡಿಮೆಯಾದ ಸಂದರ್ಭಗಳು ಹೆಚ್ಚಾಗಿ ಇಲ್ಲ. ಕೆಲವೊಮ್ಮೆ ಕಡಿಮೆ ಆದರೂ ಒಂದೊಂದು ತೊಲ (10 ಗ್ರಾಮ್) ಚಿನ್ನ ಕೊಳ್ಳುವ ಸಾಧಾರಣ ಮಟ್ಟದ ಗ್ರಾಹಕರಿಗೆ ಐದುನೂರು ರೂಪಾಯಿಗಳ ಕಡಿತ ಹೆಚ್ಚು ವ್ಯತ್ಯಾಸ ಉಂಟುಮಾಡದು.

